ಚಂದನವನ 2021

# ಕೆಲಸದ ಖುಷಿ, ಜನಪ್ರಿಯತೆಯ ರುಚಿ

ಕಳೆದ ವರ್ಷವೆಲ್ಲ, ಲಾಕ್‌ಡೌನ್ ಆಗಿ, ಸಿನಿಮಾಗಳು ರಿಲೀಸ್ ಆಗಿರಲಿಲ್ಲ, ಚಿತ್ರೀಕರಣಗಳೂ ಅನಿಶ್ಚಿತವಾಗಿದ್ದವು. ಈ ವರ್ಷ ಹೇಗಿರುತ್ತದೆಯೋ ಎಂಬ ಆತಂಕ ಇತ್ತು. ಆದರೆ ಈ ವರ್ಷದ ಆರಂಭದಲ್ಲಿಯೇ ‘ಮದಗಜ’, ‘ಅವತಾರ ಪುರುಷ’ ಎಲ್ಲ ಚಿತ್ರೀಕರಣ ಬಹುತೇಕ ಮುಗಿಯಿತು. ಮತ್ತೆ ಲಾಕ್‌ಡೌನ್ ಆಯ್ತು. ಲಾಕ್‌ಡೌನ್ ತೆರವು ಆದ ಮೇಲೆ, ಜುಲೈ ಕೊನೆಯಿಂದ ನಾನು ತುಂಬಾನೇ ಬ್ಯುಸಿ ಆಗೋದೆ. ನಿರಂತರವಾಗಿ ಕೆಲಸ ಮಾಡ್ತಾನೇ ಇದ್ದೀನಿ. ಈ ವರ್ಷದಲ್ಲಿಯೇ ತಮಿಳು, ತೆಲುಗು ಎರಡೂ ಚಿತ್ರರಂಗದಲ್ಲಿಯೂ ಕೆಲಸ ಮಾಡಲು ಸಾಧ್ಯವಾಯಿತು.

ಇದು ಒಂದು ರೀತಿಯಾದರೆ, ನಾನು ನಟಿಸಿದ ಸಿನಿಮಾಗಳ ಬಿಡುಗಡೆಯೂ ಆದವು. ‘ಕೋಟಿಗೊಬ್ಬ 3’ ಬಿಡುಗಡೆ ಆಯಿತು, ‘ಮದಗಜ’ವೂ ಬಿಡುಗಡೆಯಾಗಿ ಒಳ್ಳೆಯ ಸ್ಪಂದನ ಸಿಗುತ್ತಿದೆ. ‘ಅವತಾರ ಪುರುಷ’ ಬಿಡುಗಡೆಯಾಗುತ್ತಿದೆ.

ಮೇಲೆ ಹೇಳಿದ ಹಾಗೆಯೇ ಕಳೆದ ಐದು ತಿಂಗಳಿಂದಲೂ ನಾನು ತುಂಬ ಬ್ಯುಸಿಯಾಗಿಬಿಟ್ಟಿದ್ದೇನೆ. ಒಂದು ದಿನವೂ ಬಿಡುವು ಸಿಕ್ಕಿಲ್ಲ. ಎಲ್ಲಾದರೂ ಹೋಗಬೇಕು, ಮನೆಯವರ ಜೊತೆ ಕಾಲ ಕಳೆಯಬೇಕು ಅನಿಸುತ್ತದೆ, ಸಾಧ್ಯವಾಗಿಲ್ಲ. ಆದರೆ ಅದರ ಬಗ್ಗೆ ನನಗೆ ಯಾವ ಬೇಸರವೂ ಇಲ್ಲ. ಯಾಕೆಂದರೆ ಕೆಲಸ ಅಂತ ಬಂದರೆ ಅದರಲ್ಲಿ ಮುಳುಗಿಹೋಗಬೇಕು ಅನ್ನುವವಳು ನಾನು. ಈ ದೃಷ್ಟಿಯಿಂದ ನಾನು ಅದೃಷ್ಟವಂತೆ. ಹೀಗೆ ಲಾಕ್‌ಡೌನ್ ತೆರವಾದ ತಕ್ಷಣ ಇಷ್ಟೊಂದು ಕೆಲಸ ಸಿಗುವುದೂ ಅದೃಷ್ಟವೇ ಅಲ್ಲವೇ? ಒಬ್ಬ ಕಲಾವಿದೆಯಾಗಿ ಇದಕ್ಕಿಂತ ಇನ್ನೇನು ಬೇಕು ಹೇಳಿ? 2021 ನನ್ನ ಪಾಲಿಗೆ ಸಾಕಷ್ಟು ಖುಷಿಯನ್ನೂ ಕೆಲಸವನ್ನೂ ಕೊಟ್ಟಿದೆ.

**-ಆಶಿಕಾ ರಂಗನಾಥ್, ನಟಿ**



ಸೆ. 10ಕ್ಕೆ ಬಿಡುಗಡೆಯಾದ, ಯೋಗೀಶ್–ಕಾವ್ಯಾ ಶೆಟ್ಟಿ ಮುಖ್ಯಭೂಮಿಕೆಯಲ್ಲಿ ನಟಿಸಿದ್ದ ‘ಲಂಕೆ’ ಸಿನಿಮಾಕ್ಕೂ ಪ್ರೇಕ್ಷಕನ ಎದೆಯಲ್ಲಿ ಸಿನಿಮಾ ಕಿಚ್ಚು ಹೊತ್ತಿಸಲು ಸಾಧ್ಯವಾಗಲಿಲ್ಲ.

ಅಕ್ಟೋಬರ್ ಮಧ್ಯದವರೆಗೂ ಸ್ಟಾರ್‌ಗಳ ಯಾವ ಸಿನಿಮಾವೂ ಚಿತ್ರಮಂದಿರದ ಕಡೆ ಹೊರಳಲಿಲ್ಲ. ಚಿತ್ರಮಂದಿರಗಳಲ್ಲಿ ಇನ್ನೂ ನೂರರಷ್ಟು ಸೀಟುಗಳನ್ನು ಭರ್ತಿ ಮಾಡಲು ಅನುಮತಿ ಸಿಗದಿರುವುದೂ, ಜನರೂ ಮನೆಯಿಂದ ಹೊರಬಿದ್ದು ಗುಂಪಿನಲ್ಲಿ ಸಿನಿಮಾ ನೋಡುವ ಮೂಡ್‌ಗೆ ಬರದಿರುವುದೂ ಇದಕ್ಕೆ ಕಾರಣವಾಗಿತ್ತು.

ಈ ಅವಧಿಯಲ್ಲಿ ವಾರಕ್ಕೆ ಎರಡು ಮೂರರ ಹಾಗೆ ಸಣ್ಣ ಬಜೆಟ್‌ನ, ಹೊಸಬರ ಹಲವು ಸಿನಿಮಾಗಳು ಬಿಡುಗಡೆಯಾದವು. ಪಿ. ಶೇಷಾದ್ರಿ ನಿರ್ದೇಶನದ ‘ಮೋಹನದಾಸ’ ಚಿತ್ರಮಂದಿರದಲ್ಲಿ ಕಾಣಿಸಿಕೊಂಡಿದ್ದು, ಸೂರಜ್ ಗೌಡ ನಿರ್ದೇಶನ ಮಾಡಿ ನಟಿಸಿದ್ದ, ರಾಮ್‌ಕುಮಾರ್ ಮಗಳು ಧನ್ಯಾ ರಾಮ್‌ಕುಮಾರ್ ನಾಯಕಿಯಾಗಿ ಪರಿಚಿತರಾಗಿದ್ದ ‘ನಿನ್ನ ಸನಿಹಕೆ’ ಸಿನಿಮಾ ಪ್ರೇಕ್ಷಕರ ಸನಿಹಕ್ಕೆ ಹೋಗಲು ಯತ್ನಿಸಿದ್ದೂ ಇದೇ ಅವಧಿಯಲ್ಲಿ.

ಎರಡನೇ ಅಲೆಯ ನಂತರ ಬಿಡುಗಡೆಯಾದ ಯಾವ ಸಿನಿಮಾಗಳೂ ಪ್ರೇಕ್ಷಕರನ್ನು ಚಿತ್ರಮಂದಿರಕ್ಕೆ ಕರೆತರಲಿಲ್ಲ. ಇಡೀ ಗಾಂಧಿನಗರವೇ ಒಂದು ‘ಕಿಕ್‌ಸ್ಟಾರ್ಟ್’ಗಾಗಿ ಆತಂಕ, ಕುತೂಹಲದಿಂದ ಕಾಯುತ್ತಿದ್ದಾಗಲೇ ‘ಸಲಗ’ನ ಆಗಮನದ ಸುದ್ದಿ ಹೊರಬಿದ್ದಿದ್ದು.

‘ಸಲಗ’ ಸಿನಿಮಾ ಮೇಲೆ ಎಲ್ಲರ ಕಣ್ಣು ನೆಡಲು ಹಲವು ಕಾರಣಗಳಿದ್ದವು. ನಟನಾಗಿ, ಕಥೆಗಾರನಾಗಿ ಗೊತ್ತಿದ್ದ ದುನಿಯಾ ವಿಜಯ್ ಈ ಸಿನಿಮಾದ ಮೂಲಕ ನಿರ್ದೇಶನದ ಟೋಪಿಯನ್ನೂ ಧರಿಸಿದ್ದರು. ಮದವೇರಿದ ಸಲಗದಂತಿರುವ ಅವರ ಜೊತೆಯಲ್ಲಿ ಚಂದದ ಗುಬ್ಬಚ್ಚಿಯಂತ ಸಂಜನಾ ಆನಂದ್ ಅವರು ಇದ್ದಿದ್ದು ಕುತೂಹಲ ಹುಟ್ಟಿಸಿತ್ತು. ಚರಣ್‌ರಾಜ್ ಸಂಯೋಜನೆಯ ಹಾಡುಗಳು ಆಗಲೇ ಸಾಕಷ್ಟು ಸದ್ದು ಮಾಡುತ್ತಿದ್ದವು.

ಕೊರೊನಾ ಭಯವನ್ನು ಮೀರಿ ಚಿತ್ರಮಂದಿರಕ್ಕೆ ಮೊದಲು ಅಡಿಯಿಡಬಲ್ಲವರು ಹದಿ ವಯದ ಹುಡುಗರೇ. ಸೆನ್ಸಾರ್ ಮಂಡಳಿಯಿಂದ ‘ಎ’ ಪ್ರಮಾಣಪತ್ರ ಪಡೆದಿದ್ದ ‘ಸಲಗ’ ಸಿನಿಮಾಪ್ರೇಮದ ಪಡ್ಡೆಗಳನ್ನು ಗುಂಪು ಗುಂಪಾಗಿ ಚಿತ್ರಮಂದಿರಕ್ಕೆ ಕರೆತರುವ ಎಲ್ಲ ಸಾಧ್ಯತೆಗಳೂ ಗೋಚರವಾಗುತ್ತಿದ್ದವು. ಒಮ್ಮೆ ಚಿತ್ರಮಂದಿರಕ್ಕೆ ಜನ ಬರಲು ಶುರುವಾದರೆ ಎಲ್ಲ ಮೊದಲಿನಂತಾಗುತ್ತದೆ ಎನ್ನುವ ಆಸೆ ಎಲ್ಲರ ಮನದಲ್ಲಿತ್ತು.

ಅತ್ತ ಹಲವು ವರ್ಷಗಳಿಂದ ಡಬ್ಬಾದಲ್ಲಿ ಕೂತಿದ್ದ,